ಸಂಯುಕ್ತ ಕರ್ನಾಟಕ

## ಮೀನಾಕ್ಷಿ, ಅರವಿಂದ್‌ಗೆ ವೈಯಕ್ತಿಕ ಗರಿ

# ಜೈನ್ ವಿವಿಗೆ ಸಮಗ್ರ ಪ್ರಶಸ್ತಿ

**ಬೆಂಗಳೂರು, ಅ.30:** ಗುರುವಾರ ಮುಕ್ತಾಯ ಕಂಡ ಅಖಿಲ ಭಾರತ ಅಂತರ ವಿವಿ ಈಜು ಚಾಂಪಿಯನ್‌ಶಿಪ್‌ನಲ್ಲಿ ಆತಿಥೇಯ ಜೈನ್ ವಿವಿ (154.5 ಪಾಯಿಂಟ್ಸ್) ಸಮಗ್ರ ಚಾಂಪಿಯನ್‌ಶಿಪ್ ಗೆದ್ದುಕೊಂಡು ಹಿರಿಮೆ ಮೆರೆಯಿತು.

ಜತೆಗೆ ಮಹಿಳಾ ವಿಭಾಗದಲ್ಲಿಯೂ ಜೈನ್ ವಿವಿ ಸಮಗ್ರ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿತು. ಜೈನ್ ವಿವಿ ಮಹಿಳಾ ತಂಡ ಒಟ್ಟಾರೆ 106 ಪಾಯಿಂಟ್ಸ್ ಪಡೆದರೆ, ದೆಹಲಿ ವಿವಿಯು 60 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನ ಪಡೆಯಿತು. ಅಂತೆಯೇ ಮಹಿಳಾ–ಪುರುಷರ ವಿಭಾಗದಲ್ಲಿ ದೆಹಲಿ 131 ಪಾಯಿಂಟ್ಸ್ ಪಡೆದು ಎರಡನೇ ಸ್ಥಾನ ಪಡೆದರೆ, 97 ಪಾಯಿಂಟ್ಸ್ ಪೇರಿಸಿದ ವಿಟಿಯು ಬೆಳಗಾವಿ ತೃತೀಯ ಸ್ಥಾನ ಪಡೆಯಿತು.

ಇತ್ತ ಪುರುಷರ ವಿಭಾಗದಲ್ಲಿ ವಿಟಿಯು ಬೆಳಗಾವಿ 65 ಪಾಯಿಂಟ್ಸ್‌ಗಳೊಂದಿಗೆ ಸಮಗ್ರ ಚಾಂಪಿಯನ್‌ಶಿಪ್ ಪಡೆದರೆ, 62 ಪಾಯಿಂಟ್ಸ್ ಕಲೆಹಾಕಿದ ಪಂಜಾಬ್ ವಿವಿ ಎರಡನೇ ಸ್ಥಾನ ಗಳಿಸಿತು.

ಇನ್ನು ಕೂಟದುದ್ದಕ್ಕೂ ಅಮೋಘ ಪ್ರದರ್ಶನ ನೀಡಿದ ಜೈನ್ ವಿವಿಯ ಮೀನಾಕ್ಷಿ (66 ಪಾಯಿಂಟ್ಸ್) ಅತ್ಯುತ್ತಮ ಮಹಿಳಾ ಅಥ್ಲೀಟ್ ಎನಿಸಿದರೆ, ಪುರುಷರ ವಿಭಾಗದಲ್ಲಿ ವಿಟಿಯು ಬೆಳಗಾವಿಯ ಅರವಿಂದ್ (45 ಪಾಯಿಂಟ್ಸ್) ಕರೆಸ್ಪಾಂಡೆಂಟ್ ಪ್ರಶಸ್ತಿಗೆ ಭಾಜನರಾದರು.




### ಇಂದಿನ ಫಲಿತಾಂಶ

ಪುರುಷರ 100 ಮೀಟರ್ ಫ್ರೀಸ್ಟೈಲ್: 1. ನೀಲ್ ಕಾಂಟ್ರಾಕ್ಟರ್ (53.56 ಸೆ.); 2. ಅಮನ್ ಘಾಯ್ (ಗುರುನಾನಕ್) (53.57 ಸೆ.); 3. ವಿರಾಜ್ ಧೋಕ್ಲೆ (ಎಸ್‌ಪಿಪಿಯು) (54.95 ಸೆ.); 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್: ಜಶನ್‌ದೀಪ್ ಸಿಂಗ್ (ಪಂಜಾಬ್) (1:05.56 ನಿ); ಪುಲ್ಕಿತ್ (ದೇವಿಲಾಲ್) (1:06.65 ನಿ.); ದೀಪಕ್ ಕುಮಾರ್ (ಜಿಯುಐ) (1:09.85 ಮಿ.); 200 ಮೀಟರ್ ಫ್ರೀಸ್ಟೈಲ್: ಬಾಬಿ ರಾನ (ದೆಹಲಿ) (2:09.02 ನಿ.); ಮಿತೇಶ್ ಕುಂಟೆ (ಶಿವಾಜಿ) (2:11.31 ಮಿ.); ಕುನಾಲ್ ಮೋಹಿತೆ (ಮುಂಬೈ) (2:12.12 ನಿ.); ಮಹಿಳೆಯರ 100 ಮೀಟರ್ ಫ್ರೀಸ್ಟೈಲ್: ಮೀನಾಕ್ಷಿ (1:01.44 ನಿ.); ಟಿ. ಸ್ನೇಹಾ (ಆರ್‌ಜಿಯುಎಚ್‌ಎಸ್) (1:02.71 ನಿ.); ಎಸ್. ಸಂಧ್ಯಾ (ಕೇರಳ) (1:03.71 ನಿ.); 100 ಮೀಟರ್ ಬ್ರೆಸ್ಟ್‌ಸ್ಟ್ರೋಕ್: ಪ್ರಿಯಾಂಕ (ದೆಹಲಿ) (1:18.47 ನಿ.); ಪೂರ್ವಾ ಶೆಟ್ಟಿ (ಜೈನ್) (1:21.11 ನಿ.); ದಿವ್ಯಾ ಗುರುಸ್ವಾಮಿ (ವಿಟಿಯು) (1:23.54 ನಿ.); 200 ಮೀಟರ್ ಫ್ರೀಸ್ಟೈಲ್: ಮೀನಾಕ್ಷಿ (ಜೈನ್) (2:30.44 ನಿ.); ವಂದಿತಾ (ದೆಹಲಿ) (2:37.24 ನಿ.); ಸೃಷ್ಟಿ ನಾಗ್ (ಬಿಐಎಲ್) (2:37.98 ನಿ.)